| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
|---|---|---|---|
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 1211/2023 | | |
| | | ಸಿ.ಡಬ್ಲೂ | 1 |
| | | ಪಿ.ಡಬ್ಲೂ | 2 |
| ಸಾಕ್ಷಿದಾರರ ಹೆಸರು | ಮನ್ಸೂರ್ ಖಾನ್ ಬಿನ್ ಅಮಾನುಲ್ಲಾ ಖಾನ್ | | |
| ವಯಸ್ಸು | 51 ವರ್ಷ | | |
| ಉದ್ಯೋಗ | ಖಾಸಗಿ ಕೆಲಸ | | |
| ವಾಸಸ್ಥಳ | ಮದ್ದೂರು | | |

**ದಿನಾಂಕಃ- 06.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ-2 ರಿಂದ ಚಾಸಾ-4 ನನ್ನ ಸಂಬಂಧಿಕರು. ಚಾಸಾ-5 ರಿಂದ 11 ರವರ ಪರಿಚಯ ಇಲ್ಲ. ಆರೋಪಿತರ ಪರಿಚಯ ಇದೆ. ದಿಃ- 18.12.2022 ರಂದು ಸಂಜೆ 07.30 ರ ಸಮಯದಲ್ಲಿ ನಾನು ಮದ್ದೂರಿನಲ್ಲಿ ಇದ್ದಾಗ ಚಾಸಾ-2 ರವರು ನನಗೆ ದೂರವಾಣಿ ಕರೆ ಮಾಡಿ ತಾನು ಚನ್ನಪಟ್ಟಣದ ಭೈರಾಪಟ್ಟಣ ಫ್ಲೆ ಓವರ್ ಮೇಲೆ ಕಾರಿನಲ್ಲಿ ಹೋಗುವಾಗ ಅಪಘಾತ ಆಗಿದೆ ಎಂದು ತಿಳಿಸಿದರು. ನಾನು ತಕ್ಷಣ ಸ್ಥಳಕ್ಕೆ ಹೋಗಿ ಚಾಸಾ-2 ರವರನ್ನು ಚಿಕಿತ್ಸೆಗಾಗಿ ಕೃಪಾ ನರ್ಸಿಂಗ್ ಹೋಂ ಗೆ ಕರೆದುಕೊಂಡು ಹೋದೆನು. ಅಪಘಾತ ಹೇಗೆ ಆಯಿತು ಎಂಬ ಬಗ್ಗೆ ಚಾಸಾ-2 ರವರನ್ನು ವಿಚಾರಿಸಿದೆನು. ಚಾಸಾ-2 ರವರು ತಾನು ಕಾರಿನಲ್ಲಿ ಹೋಗುವಾಗ ತನ್ನ ಹಿಂಬದಿಯಿಂದ ಬೇರೊಂದು ಕಾರು ಡಿವೈಡರ್ ಗೆ ಡಿಕ್ಕಿ ಹೊಡೆದು ನಂತರ ನನ್ನ ಕಾರಿಗೆ ಡಿಕ್ಕಿ ಪಡಿಸಿದ್ದಾಗಿ ತಿಳಿಸಿದ್ದರು. ಅಪಘಾತ ಪಡಿಸಿದ ಕಾರಿನ ನೊಂದಣಿ ಸಂಖ್ಯೆ ಆರ್.ಜೆ.45. 8493 ಆಗಿತ್ತು. ಸದರಿ ಕಾರನ್ನು ಆ ದಿನ ಯಾರು ಚಾಲನೆ ಮಾಡುತ್ತಿದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅಪಘಾತದಿಂದಾಗಿ ಚಾಸಾ-2 ರವರ ತಲೆಗೆ ಪೆಟ್ಟು ಬಿದ್ದಿತ್ತು. ಕಾರಿನಲ್ಲಿ ಚಾಸಾ-3 ಮತ್ತು 4 ರವರು ಸಹಾ ಇದ್ದು ಅವರಿಗೂ ಸಹಾ ಪೆಟ್ಟು ಬಿದ್ದಿತ್ತು. ಗಾಯಾಳುಗಳಿಗೆ ಚಿಕಿತ್ಸೆಗೆ ದಾಖಲಿಸಿ ನಂತರ ದಿಃ 19.12.2022 ರಂದು ದೂರನ್ನು ದಾಖಲಿಸಿರುತ್ತೇನೆ.

2) ಸಾಕ್ಷಿಯು ದೂರು ಮತ್ತು ದೂರಿನ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

3) ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಪಂಚನಾಮೆ ಮತ್ತು ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ನಿಪಿ.2 ಮತ್ತು 3 ಕ್ಕೆ ಪೊಲೀಸರ ಕೋರಿಕೆಯ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.2 ಮತ್ತು 3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಲ್ಲ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**<u>ಪಾಟೀ ಸವಾಲುಃ-</u> ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1) ಅಪಘಾತದಿಂದ ಸ್ಥಳದಲ್ಲಿ ಸ್ಟೆನ್ನಿ ಜೋಸ್ ರವರು ಮೃತಪಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವು ಈಗ ನ್ಯಾಯಾಲದ ಮುಂದಿರುವ ಆರೋಪಿತನ ತಪ್ಪಿ ನಿಂದಲೇ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಿಃ 19.12.2022 ರಂದು ಸಂಜೆ 04.00 ರಿಂದ 04.35 ರ ಸಮಯದಲ್ಲಿ ಠಾಣೆಯಲ್ಲಿ ನನ್ನ ಸಮಕ್ಷಮ ಪಂಚನಾಮೆ ಮಾಡಿ ಅಪಘಾತಕ್ಕೆ ಒಳಪಟ್ಟ 2 ವಾಹನಗಳನ್ನು ಜಪ್ತುಪಡಿಸಿದ್ದರು ಎಂದರೆ ಸರಿ. ಅದೇ ದಿನ ಮಧ್ಯಾಹ್ನ 03 ಗಂಟೆ ಸಮಯಕ್ಕೆ ಅಪಘಾತ ಸ್ಥಳಕ್ಕೆ ಪೊಲೀಸರು ಭೇಟಿ ಕೊಟ್ಟು ಅಲ್ಲಿ ನಿಪಿ.2 ರಂತೆ ಸ್ಥಳ ಪಂಚನಾಮೆ ಮಾಡಿದ್ದರು ಎಂದರೆ ಸರಿ. ಆ ವೇಳೆಗೆ ನನ್ನ ಜೊತೆ ಚಾಸಾ-13 ಮತ್ತು 14 ರವರು ಹಾಜರಿದ್ದರು ಎಂದರೆ ಸರಿ. ನಿಪಿ.2 ಮತ್ತು 3 ರಲ್ಲಿ ಇರುವ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ-</u> ಆರೋಪಿ ಪರ ಶ್ರೀ. ಎಂ.ಕೆ.ಎನ್. ವಕೀಲರಿಂದ.**

1) ದೂರನ್ನು ಯಾರೋ ಬರೆದಿದ್ದು ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಬರೆದ ವಿಚಾರಗಳು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಿಂದ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆನು ಎಂಬ ವಿಚಾರವನ್ನು ಪೊಲೀಸರಿಗೆ ಹೇಳಿಕೆ ನೀಡುವ ಸಮಯದಲ್ಲಿ ತಿಳಿಸಿರುವುದಿಲ್ಲ. ಬಿ.ಎಂ. ರಸ್ತೆ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಚಾಸಾ-2 ರಿಂದ 4

ರವರು ಅಪಘಾತದಿಂದಾದ ನಷ್ಟಕ್ಕೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2) ಪಂಚನಾಮೆಗೆ ಬರುವಂತೆ ನನಗೆ ನೋಟಿಸನ್ನು ನೀಡಿಲ್ಲ. ಪಂಚನಾಮೆಯಲ್ಲಿನ ಸಂಗತಿಗಳನ್ನು ನಾನು ಕೇಳಿ ತಿಳಿದುಕೊಂಡಿಲ್ಲ. ನಾನು ಗುನ್ಹಾ ಸ್ಥಳಕ್ಕೆ ಭೇಟಿ ಕೊಟ್ಟಿದ್ದು ಮತ್ತು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ನನ್ನ ಸಮಕ್ಷಮ ವಾಹನಗಳನ್ನು ಜಪ್ತುಪಡಿಸಿ ಅಮಾನತ್ತು ಪಂಚನಾಮೆ ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗಳಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಅಳಿಯನ ತಪ್ಪಿ ನಿಂದ ಅಪಘಾತ ಆಗಿದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)**

**ಓ.ಹೇ.ಕೆ.ಸರಿ ಇದೆ.**

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು**
**ಚನ್ನಪಟ್ಟಣ**